ANNOUNCEMENT

ಅಧ್ಯಕ್ಷರು:- ವಿಧಾನಸಭಾ ಸದಸ್ಯರಾದ ಶ್ರೀ ವೀರೇಂದ್ರ ಪಾಟೀಲರು ದಿನಾಂಕ 17ನೇ ಮಾರ್ಚ್ 1993ರಂದು ಬರೆದ ಪತ್ರದಲ್ಲಿ ತಮ್ಮ ಈಗಿನ ಆರೋಗ್ಯ ಪರಿಸ್ಥಿತಿಯಿಂದಾಗಿ ದಿನಾಂಕ 17ನೇ ತಾರೀಖು ಫೆಬ್ರವರಿ 93 ಹಾಗೂ 8 ಮತ್ತು 16 ನೇ ಮಾರ್ಚ್ 93ರಂದು ಹೊರತುಪಡಿಸಿ 12ನೇ ತಾರೀಖು ಫೆಬ್ರವರಿ 93ರಿಂದ ಪ್ರಸಕ್ತ ಅಧಿವೇಶನ ಮುಕ್ತಾಯವಾಗುವವರೆಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ. ಶ್ರೀ ವೀರೇಂದ್ರ ಪಾಟೀಲರು ದಿನಾಂಕ 17ನೇ ಫೆಬ್ರವರಿ, ಹಾಗೂ 8 ಮತ್ತು 16ನೇ ಮಾರ್ಚ್ ಹೊರತುಪಡಿಸಿ ಫೆಬ್ರವರಿ 12ರಿಂದ ಪ್ರಸಕ್ತ ಅಧಿವೇಶನ ಮುಗಿಯುವವರೆಗೆ ಗೈರು ಹಾಜರಿರಲು ಅನುಮತಿ ನೀಡುವುದಕ್ಕೆ ಸಭೆಯು ಅಪೇಕ್ಷಿಸುತ್ತದೆಯೇ?

(ಮಾನ್ಯ ಸದಸ್ಯರಾರೂ ನಿರಾಕರಿಸಲಿಲ್ಲ)

ಅಧ್ಯಕ್ಷರು:- ಗೈರು ಹಾಜರಿಗೆ ಅನುಮತಿಯನ್ನು ನೀಡಲಾಗಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- **ಈಗ ಸಭೆಯನ್ನು ಮುಕ್ತಾಯಗೊಳಿಸಿದರೆ ನಾಳೆ ಬೆಳಿಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.**

ಶ್ರೀ ಆರ್.ವಿ. ದೇಶಪಾಂಡೆ:- ನಾಳೆ ನಿಧಾನವಾಗಿ ಮಧ್ಯಾಹ್ನಕ್ಕೆ ಅವರು ಉತ್ತರ ಕೊಡಬಹುದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ತಾವು ಒಪ್ಪಿಕೊಂಡ ಹಾಗೆ ಅದು ಕೌನ್ಸಿಲ್‌ನಲ್ಲಿ ಪಾಸ್ ಆಗಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ನಾಳೆ ಹತ್ತು ಗಂಟೆಗೆ ಸಭೆ ಸೇರಿ ನಂತರ 12 ಗಂಟೆಯವರೆಗೆ ಬೇಕಾದರೆ ಚರ್ಚೆ ಮಾಡಿ ನಂತರ ಮುಖ್ಯಮಂತ್ರಿಗಳು ರಿಪ್ಲೈ ಮಾಡಿದ ನಂತರ, ಅಪ್ರೋಪ್ರಿಯೇಶನ್ ಬಿಲ್ ಪಾಸ್ ಮಾಡಿ ಕೌನ್ಸಿಲ್‌ಗೆ ಕಳಿಸಬಹುದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ನಾಳೆ ಬೆಳಿಗ್ಗೆ 9-30 ಗಂಟೆಗೆ ಸೇರಿದನಂತರ 10-30 - 11-00 ಗಂಟೆವರೆಗೆ ಮಾನ್ಯ ಸದಸ್ಯರು ಮಾತನಾಡುವವರು ಮಾತನಾಡಲಿ. 11 ರಿಂದ ಮುಖ್ಯಮಂತ್ರಿಗಳು ಉತ್ತರ ಕೊಟ್ಟು ಆಮೇಲೆ.....

ಶ್ರೀ ಆರ್.ವಿ. ದೇಶಪಾಂಡೆ:- 9-30 ಗಂಟೆಗೆ ಸಭೆ ಸೇರಿ ಸಾಧಾರಣ 11 ಗಂಟೆಯವರೆಗೆ ಚರ್ಚೆಯಾಗಲಿ. ಅದರ ಮುಖ್ಯಮಂತ್ರಿಗಳ ರಿಪ್ಲೈ ಆದ ಅಪ್ರೋಪ್ರಿಯೇಶನ್ ಬಿಲ್ ಪಾಸ್ ಮಾಡಬಹುದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಸ್ವಲ್ಪ ಹೆಚ್ಚು ಕಡಿಮೆ ಮಾಡೋಣ.

ಅಧ್ಯಕ್ಷರು:- ಈಗ ಸದನದ ಕಾರ್ಯಕಲಾಪಗಳನ್ನು ಮುಂದೂಡಿ ನಾಳೆ ಬೆಳಿಗ್ಗೆ 9-30 ಗಂಟೆಗೆ ಸಭೆ ಸೇರುತ್ತದೆ.

(ಸದನವು 7 ಗಂಟೆ 7 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 30ನೇ ಮಾರ್ಚ್ ಮಾಹೆ 1993ರ ಮಂಗಳವಾರದಂದು 9-30 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)